# ಟಿಕ್‌ಟಾಕ್‌ಗೆ ಟ್ಯಾಂಗೊ ಸವಾಲ್

ಸಂತೋಷ ಹಂಚಿಕೊಳ್ಳಲಿಕ್ಕೂ ದುಃಖ ವ್ಯಕ್ತಪಡಿಸಲಿಕ್ಕೂ ಯುವಜನರು ಈಗ ಹೆಚ್ಚು ಅವಲಂಬಿತವಾಗಿರುವುದು ಸಾಮಾಜಿಕ ಜಾಲತಾಣಗಳ ಮೇಲೆ. ಈಚೆಗೆ ಆ ಸಾಲಿಗೆ ಕೆಲ ಆ್ಯಪ್‌ಗಳೂ ಸೇರಿವೆ. ಅದರಲ್ಲಿ ಟಿಕ್ ಟಾಕ್ ಸಹ ಒಂದು. ಸಂತಸ, ದುಃಖ, ಸೃಜನಶೀಲತೆ ಕಿರುವಿಡಿಯೊಗಳಿಗೆ ಜನಸಾಮಾನ್ಯರಲ್ಲಿ ಸಿಕ್ಕಾಪಟ್ಟೆ ಫೇಮಸ್ ಆಗಿರುವ ಟಿಕ್ ಟಾಕ್ ಆ್ಯಪ್‌ಗೆ ಸೆಡ್ಡು ಹೊಡೆಯಲು ಗೂಗಲ್ ಕಿರು ವಿಡಿಯೊ ಆ್ಯಪ್ ಒಂದನ್ನು ಈಚೆಗೆ ಬಿಡುಗಡೆ ಮಾಡಿದೆ.

ಜಾಗತಿಕ ವಲಯದಲ್ಲಿ ಕಿರು ವಿಡಿಯೊಗಳನ್ನು ಅಪ್‌ಲೋಡ್ ಮಾಡಲು ಅವಕಾಶವಿರುವ ಆ್ಯಪ್‌ಗಳಿಗೆ ಸಾಕಷ್ಟು ಜನಪ್ರಿಯತೆ ಇದೆ. ಅದರಲ್ಲೂ ಟಿಕ್‌ಟಾಕ್ ಇಂದು ಇಡೀ ಜಗತ್ತಿನಲ್ಲಿಯೇ ಜನಪ್ರಿಯ ಆ್ಯಪ್ ಆಗಿ




ಗುರುತಿಸಿಕೊಂಡಿದೆ. ಅಷ್ಟರಮಟ್ಟಿಗೆ ಅದು ತನ್ನ ಪ್ರಾಬಲ್ಯ ಮೆರೆದಿದೆ. ಇದೀಗ ಟಿಕ್‌ಟಾಕ್ ಅನ್ನೇ ಹೋಲುವ, ಟಿಕ್‌ಟಾಕ್ ರೀತಿಯೇ ಕಾರ್ಯನಿರ್ವಹಿಸುವ ಟ್ಯಾಂಗೊ (Tango) ಆ್ಯಪ್ ಅನ್ನು ಗೂಗಲ್ ಪರಿಚಯಿಸಿದೆ.

ಈ ಆ್ಯಪ್ ಅನ್ನು ಏರಿಯಾ 120 ಇನ್–ಹೌಸ್ ಇನ್ಕ್ಯುಬೇಟರ್ ಲ್ಯಾಬ್‌ನಿಂದ ಅಭಿವೃದ್ಧಿಪಡಿಸಲಾಗಿದೆ. ಈ ಆ್ಯಪ್ ಥೇಟ್ ಟಿಕ್‌ಟಾಕ್‌ನಂತೆಯೇ ಕಾರ್ಯನಿರ್ವಹಿಸುತ್ತದೆ. ಆ ಆ್ಯಪ್‌ನಲ್ಲಿದ್ದಂತೆ ಕಿರು ವಿಡಿಯೊಗಳನ್ನು ಅಪ್‌ಲೋಡ್ ಮಾಡಬಹುದು. ಅಪ್‌ಲೋಡ್ ಮಾಡಿದ ವಿಡಿಯೊಗಳಿಗೆ ಲೈಕ್ಸ್, ಕಾಮೆಂಟ್ಸ್ ಮತ್ತು ಅದನ್ನು ಶೇರ್ ಸಹ ಮಾಡಬಹುದು. ಅಷ್ಟೇ ಅಲ್ಲ ಇತರರನ್ನೂ ಫಾಲೋ ಮಾಡುವ ಹಾಗೂ ನಿಮಗಿಷ್ಟವಾದ ಗುಂಪಿನ ಜೊತೆ ಚಾಟ್ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ.

ಆ್ಯಂಡ್ರಾಯ್ಡ್ ಮತ್ತು ಐಒಎಸ್ ಆಧಾರಿತ ಸ್ಮಾರ್ಟ್‌ಫೋನ್‌ಗಳಿಗೆ ಇದು ಸ್ಪಂದಿಸಲಿದ್ದು, ಗೂಗಲ್ ಪ್ಲೇ ಸ್ಟೋರ್ ಹಾಗೂ ಐಒಎಸ್‌ನ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್‌ಗೆ ಲಭ್ಯವಿದೆ. ಈ ಆ್ಯಪ್ ಬಗ್ಗೆ ಪ್ರತಿಕ್ರಿಯಿಸಿರುವ ಗೂಗಲ್ ಸಂಸ್ಥೆಯು, 'ಇದು ಡು ಇಟ್ ಯುವರ್‌ಸೆಲ್ಫ್ (DIY) ಹಾಗೂ ಸೃಜನಶೀಲತೆಯನ್ನು ಮುಖ್ಯವಾಗಿ ಗುರಿಯಾಗಿಸಿಕೊಂಡು ಅಭಿವೃದ್ಧಿಪಡಿಸಿರುವ ಆ್ಯಪ್' ಎಂದಿದೆ.

ಕ್ರಾಫ್ಟಿಂಗ್, ಅಡುಗೆ, ಚಿತ್ರಕಲೆ, ಸೌಂದರ್ಯ, ಫ್ಯಾಷನ್ ಮತ್ತು ಹೆಚ್ಚಿನವುಗಳನ್ನು ಒಳಗೊಂಡಂತೆ ಅನೇಕ ವಿಷಯಗಳ ಕುರಿತು ವಿಡಿಯೊಗಳನ್ನು ಹಂಚಿಕೊಳ್ಳಲು ಹಾಗೂ ಸೃಜನಶೀಲತೆವುಳ್ಳವರಿಗೆ ಇದು ಉತ್ತಮ ವೇದಿಕೆಯಾಗಲಿದೆ ಎಂದು ಗೂಗಲ್ ಅಭಿಪ್ರಾಯಪಟ್ಟಿದೆ.

ಟಿಕ್‌ಟಾಕ್, ಪಿನ್‌ಟಾರೆಸ್ಟ್ ಮತ್ತು ಬೈಟ್ ಆ್ಯಪ್‌ಗಳನ್ನೂ ಹೋಲುವ ಟ್ಯಾಂಗೊ ಕಲಿಕೆಯ ಮೇಲೆ ಹೆಚ್ಚು ಗಮನಹರಿಸುತ್ತದೆ. ಟಿಕ್‌ಟಾಕ್ ಮನರಂಜನೆಯ ಮೇಲೆ ಗಮನಹರಿಸಿದರೆ ಟ್ಯಾಂಗೊ ಮಾತ್ರ ಮನರಂಜನೆ ಸೇರಿದಂತೆ ಎಲ್ಲ ವಿಚಾರಗಳ ಬಗ್ಗೆಯೂ ಗಮನಹರಿಸುತ್ತದೆ. ಜೊತೆಗೆ ಯಾವುದಾದರೂ ಒಂದು ವಿಚಾರದ ಬಗ್ಗೆ ತ್ವರಿತವಾಗಿ ಸ್ಪಷ್ಟವಾಗಿ ಚಿಕ್ಕದಾಗಿ ಬಳಕೆದಾರರಿಗೆ ಸಲಹೆ ನೀಡುತ್ತದೆ.

ಇದರಲ್ಲಿ ಒಂದು ನಿಮಿಷದ ವಿಡಿಯೊಗಳನ್ನು ಮಾತ್ರ ಅಪ್‌ಲೋಡ್ ಮಾಡಲು ಸಾಧ್ಯ. ಒಂದು ನಿಮಿಷದ ಅವಧಿಯೊಳಗೆ ಬಳಕೆದಾರರು ತಾವು ಹೇಳಬೇಕಿರುವುದನ್ನು ಹಂಚಿಕೊಳ್ಳಬೇಕು. ಅಡುಗೆ ಕಲಿಕೆಗೆ, ದಿನನಿತ್ಯದ ಕರಕುಶಲ ವಸ್ತುಗಳ ತಯಾರಿಕೆ, ಸಂತಸದ ಮಾತು, ದುಃಖದ ವಿಚಾರ ಹೀಗೆ ಬಳಕೆದಾರರು ಯಾವ ವಿಚಾರದ ಬಗ್ಗೆಯಾದರೂ ಇದರಲ್ಲಿ ಹೇಳಿಕೊಳ್ಳಬಹುದು. ಇದರಲ್ಲಿ 'ಟ್ರೈ ಇಟ್' ಆಯ್ಕೆ ಇದ್ದು, ಅದನ್ನು ಕ್ಲಿಕ್ಕಿಸಿದರೆ 'ಹೌ ಟು' ಹಾಗೂ ಮನರಂಜನೆ ಸೇರಿದಂತೆ ಎಲ್ಲ ರೀತಿಯ ವಿಡಿಯೊಗಳನ್ನು ಹೇಗೆ ಅಪ್‌ಲೋಡ್ ಮಾಡಬೇಕು ಎಂಬುದನ್ನು ತಿಳಿಸುತ್ತದೆ. ■

## ವಾಟ್ಸ್‌ಆ್ಯಪ್‌ನಲ್ಲಿ ಕೃತಕ ಡಾರ್ಕ್ ಮೋಡ್!

ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿ ಡಾರ್ಕ್ ಮೋಡ್ (ನೈಟ್ ಮೋಡ್) ಆಯ್ಕೆ ಇದ್ದರೂ ಗೂಗಲ್‌ನ ಆ್ಯಪ್‌ಗಳನ್ನು ಹೊರತುಪಡಿಸಿ ಬಹುತೇಕ ಆ್ಯಪ್‌ಗಳು ಅದಕ್ಕೆ ಸ್ಪಂದಿಸುತ್ತಿಲ್ಲ. ಕಾರಣ ಆಯಾ ಆ್ಯಪ್‌ಗಳು ತಮ್ಮ ಆ್ಯಪ್‌ಗಳಲ್ಲಿ ಡಾರ್ಕ್ ಮೋಡ್ ಆಯ್ಕೆಯನ್ನು ಅಭಿವೃದ್ಧಿ ಪಡಿಸದಿರುವುದು. ಇಂತಹ ಆ್ಯಪ್‌ಗಳ ಸಾಲಿನಲ್ಲಿ ವಾಟ್ಸ್‌ಆ್ಯಪ್ ಮೊದಲು ನಿಲ್ಲುತ್ತದೆ.

2019ನೇ ವರ್ಷದ ಮಧ್ಯದಿಂದಲೂ ಡಾರ್ಕ್‌ಮೋಡ್ ಆಯ್ಕೆಯನ್ನು ಪರಿಚಯಿಸುವುದಾಗಿ ವಾಟ್ಸ್‌ಆ್ಯಪ್ ಹೇಳಿಕೊಂಡು ಬರುತ್ತಲೇ ಇದೆ. ವಾಟ್ಸ್‌ಆ್ಯಪ್‌ನ ಸಿಬ್ಬಂದಿ ಸಹ ಈ ವಿಚಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಸದ್ಯದ ಮಟ್ಟಿಗೆ ಆ್ಯಂಡ್ರಾಯ್ಡ್ ಫೋನ್‌ಗಳಲ್ಲಿನ ವಾಟ್ಸ್‌ಆ್ಯಪ್‌ಗೆ ಡಾರ್ಕ್ ಮೋಡ್ ಸಿಗುವ ಸಾಧ್ಯತೆ ಇಲ್ಲ. ಇನ್ನೂ ಕೆಲ ತಿಂಗಳುಗಳ ವರೆಗೆ ಕಾಯಬೇಕಿದೆ. ಅಲ್ಲಿವರೆಗೂ ಡಾರ್ಕ್ ಮೋಡ್ ಆಯ್ಕೆಗೆ ಪರ್ಯಾಯವಾಗಿ ವಾಟ್ಸ್‌ಆ್ಯಪ್‌ನಲ್ಲಿ ಡಾರ್ಕ್ ಥೀಮ್ ಬಳಸಿ ಡಾರ್ಕ್ ಮೋಡ್ ಅನುಭವವನ್ನು ಪಡೆಯಬಹುದು.

ಅದು ಹೇಗೆ ಅನ್ನುವ ಪ್ರಶ್ನೆಗೆ ಉತ್ತರವೂ ಇಲ್ಲಿದೆ. ವಾಟ್ಸ್‌ಆ್ಯಪ್ ಓಪನ್ ಮಾಡಿ ಸೆಟ್ಟಿಂಗ್ಸ್‌ಗೆ ಹೋಗಿ. ಬಳಿಕ ಅಲ್ಲಿ ಕಾಣುವ 'ಚಾಟ್ಸ್' ಆಯ್ಕೆಯನ್ನು ಕ್ಲಿಕ್ಕಿಸಿ, ನಂತರ ಪರದೆ ಮೇಲೆ ಕಾಣುವ ವಾಲ್‌ಪೇಪರ್ ಅನ್ನು ಒತ್ತಿದರೆ, 'ನೋ ವಾಲ್‌ಪೇಪರ್', 'ಗ್ಯಾಲರಿ', 'ಸಾಲಿಡ್ ಕಲರ್', 'ವಾಲ್‌ಪೇಪರ್ ಲೈಬ್ರರಿ', 'ಡೀಫಾಲ್ಟ್' ಆಯ್ಕೆಗಳು ಕಾಣುತ್ತವೆ. ಆ ಪೈಕಿ 'ಸಾಲಿಡ್ ಕಲರ್' ಆಯ್ಕೆಯನ್ನು ಕ್ಲಿಕ್ಕಿಸಿ ಕಪ್ಪು ಬಣ್ಣವನ್ನು ಆಯ್ಕೆ ಮಾಡಿ ಸೆಟ್ ಆಯ್ಕೆ ಕ್ಲಿಕ್ಕಿಸಿದರೆ ನಿಮ್ಮ ವಾಟ್ಸ್‌ಆ್ಯಪ್‌ನಲ್ಲಿ ಕೃತಕ ಡಾರ್ಕ್ ಮೋಡ್ ಆಯ್ಕೆ ಲಭ್ಯ. ಆದರೆ, ಮೆಸೇಜ್ ಥ್ರೆಡ್ಸ್ ಮಾತ್ರ ಸಹಜವಾಗಿ ಬಿಳಿ ಬಣ್ಣದಲ್ಲಿಯೇ ಕಾಣುತ್ತದೆ.

### ತಪ್ಪದೇ ಡಾರ್ಕ್ ಮೋಡ್ ಬಳಸಿ

ಡಾರ್ಕ್ ಮೋಡ್ ಆಯ್ಕೆಯು ಲಭ್ಯವಿದೆಯೇ ಎಂಬುದನ್ನು ಖಾತರಿಮಾಡಿಕೊಂಡ ಬಳಿಕವೇ ಬಹುತೇಕ ಗ್ರಾಹಕರು ಈಚೆಗೆ ಸ್ಮಾರ್ಟ್‌ಫೋನ್‌ಗಳ ಖರೀದಿಗೆ ಮುಂದಾಗುತ್ತಿದ್ದಾರೆ. ಇದೇ ಕಾರಣಕ್ಕೆ ಬಹುತೇಕ ಫೋನ್‌ಗಳಲ್ಲಿ ಡಾರ್ಕ್ ಮೋಡ್ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸ್ಮಾರ್ಟ್‌ಫೋನ್ ಬಳಕೆದಾರರು ತಪ್ಪದೇ ಸೆಟ್ಟಿಂಗ್ಸ್‌ಗೆ ಹೋಗಿ ಡಿಸ್‌ಪ್ಲೇ ಅನ್ನು ಕ್ಲಿಕ್ಕಿಸಿ ಈ ಆಯ್ಕೆಯನ್ನು ಆನ್ ಮಾಡಿ. ಡಾರ್ಕ್ ಮೋಡ್‌ನಿಂದಾಗಿ ಸ್ಮಾರ್ಟ್‌ಫೋನ್‌ಗಳಲ್ಲಿ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಕಣ್ಣಿಗೂ ಹೆಚ್ಚು ಹಿತಕರವಾದ ಅನುಭವ ಸಿಗುತ್ತದೆ. ಹೀಗಾಗಿಯೇ ಡಾರ್ಕ್ ಮೋಡ್ ಆಯ್ಕೆಗೆ ಹೆಚ್ಚು ಬೇಡಿಕೆ ಇರುವುದು.

■ ಶಶಿಕುಮಾರ್ ಸಿ.